ಬಿಟ್ಟಿರಬಹುದು. ಆದ್ದರಿಂದ ಅವರಿಗೆ ಒಂದು ನಿಮಿಷ ಅವಕಾಶ ಕೊಡಿ. ಅವರದಾದ ಮೇಲೆ ನನಗೆ ಒಂದು ನಿಮಿಷ ಕೊಡಿ.

ಉಪಾಧ್ಯಕ್ಷರು :- ಅವರು ನೋಟೀಸ್ ಕೊಡಬೇಕಲ್ಲ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ :- ನನ್ನ ಲೆಟರ್ ಇದೆ ನೋಡಿ ಸ್ವಾಮಿ.

ಉಪಾಧ್ಯಕ್ಷರು :- ಆಯಿತು, ಪ್ರಸ್ತಾಪ ಮಾಡಿ, 2 ನಿಮಿಷದಲ್ಲಿ ಮುಗಿಸಬೇಕು ಉದ್ದುದ್ದ ಭಾಷಣ ಮಾಡುವ ಹಾಗೆ ಇಲ್ಲ.

(ಗ) <u>ಅಲ್ಪ ಸಂಖ್ಯಾತ ಕುರಿತು</u>

★ಶ್ರೀ ಸೈಯ್ಯದ್ ಜುಲ್ಫಿಕರ್ ಹಷ್ಮಿ :- ಮಾನ್ಯ ಉಪಾಧ್ಯಕ್ಷರೇ ಕರ್ನಾಟಕ ಮೈನಾರಿಟಿ ಕಮೀಷನ್‌ನಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರ ಕಾಲದಲ್ಲಿ 79ರ ಹುಟ್ಟು ಹಬ್ಬ ಶ್ರೀಮಾನ್ ದೇವರಾಜ ಅರಸ್ ಅವರದ್ದು, ಆಯಿತು ಆ ಸಮಾರಂಭದಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದರಂತಹ ಶ್ರೀಮಾನ್ ವೀರಪ್ಪ ಮೊಯ್ಲಿಲಿಯವರು ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಎಂದು ಹೇಳಿ ಅವರ ಅಭಿವೃದ್ಧಿ ಸಲುವಾಗಿ ಒಂದು ಕಾರ್ಯಕ್ರವನ್ನು ಕೊಟ್ಟಿದ್ದರು. ಮೈನಾರಿಟಿ ಕಮೀಷನ್‌ನಲ್ಲಿ ಅಲ್ಪಸಂಖ್ಯಾತರಿಗೆ ಕೋ ಆಪರೇಟಿವ್ ಮೂಮೆಂಟ್‌ನಲ್ಲಿ ಇನ್‌ವಾಲ್ವ್ ಮಾಡಬೇಕು ಎಂದು ಒಬ್ಬ ಜಾಯಿಂಟ್ ರಿಜಿಸ್ಟಾರ್ ಅಪಾಯಿಂಟ್ ಆದರು. ಆದರೆ ಈಗ ಏನು ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು ಇದ್ದಾರೆ ಅವರು ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ, ಈ ಮೈನಾರಿಟಿ ಕಮಿಷನ್‌ನಲ್ಲ ಏನು ಒಂದು ಜಾಯಿಂಟ್ ರಿಜಿಸ್ಟಾರ್ ಹುದ್ದೆ ಇದೆ ಅದನ್ನು ಅಬಾಲಿಸ್ ಮಾಡಬೇಕು ಎಂದು ಸರ್ಕಾರಕ್ಕೆ ಪತ್ರ ಬರಿದಿದ್ದಾರೆ. ಅದಕೋಸ್ಕರ, ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ ಅಲ್ಲಿ 6 ಜನ ಸಬ್ ರಿಜಿಸ್ಟಾರ್ ಪೋಸ್ಟ್‌ಗಳ ಅಬಾಲಿಶ್ ಆಗಬಾರದು ಆ ಹುದ್ದೆಗಳು ಅಲ್ಲಿ ಹಾಗೆಯೇ ಇರಬೇಕು. ಒಂದು ಡಿವಿಜನ್‌ಗೆ ಒಬ್ಬ ಇನ್ಸ್‌ಪೆಕ್ಟರ್ ಎಂದು ಅಪಾಯಿಂಟ್ ಆಗಬೇಕು. ಇದನ್ನು ಮಾನ್ಯ ಸಹಕಾರಿ ಸಚಿವರು ಸಹ ಒಪ್ಪಿಕೊಂಡಿದ್ದಾರೆ. ಈಗ ಅಲ್ಲಿ ಏನು ಮೈನಾರಿಟಿ ಕಮಿಷನ್ ಅಧ್ಯಕ್ಷರು ಇದ್ದಾರೆ ಅವರು ಅಲ್ಪ ಸಂಖ್ಯಾತರಿಗೆ ಬೈಯುವುದು, ಅವರ ಕಲ್ಚರ್‌ಗೆ ಬೈಯುವುದು, ಅವರ ಭಾಷೆಗೆ ಬೈಯುವುದು ಇದು ನಡೆಯುತ್ತಿದೆ.

ಉಪಾಧ್ಯಕ್ಷರು :- ನೀವು ಒಂದೇ ಸಮನೆ ಭಾಷಣ ಮಾಡುತ್ತಾ ಹೋದರೆ ಹೇಗೆ? ಅವರು ಉತ್ತರ ಕೊಡುತ್ತಾರೆ ಕೂರಿ.

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಆಜಾಯಿಂಟ್ ರಿಜಿಸ್ಟಾರ್ ಹುದ್ದೆ ಅಲ್ಲಿಯೇ ಇರುತ್ತದೆ. ಆ ಹುದ್ದೆ ಅಬಾಲಿಶ್ ಆಗುವುದಿಲ್ಲ. ಮತ್ತೆ ಅಧಿಕಾರಿಗಳು ಯಾರು ಎಲ್ಲೆಲ್ಲಿ ಇರಬೇಕು ಅದು ನಮಗೆ ಗೊತ್ತಿದೆ. ಆ ವಿಚಾರ ಸರ್ಕಾರಕ್ಕೆ ಬಿಟ್ಟಿದ್ದುದು.

ಶ್ರೀ ಸಯದ್ ಜುಲ್ಫಿಕರ್ ಹಷ್ಮಿ :- ಮಾನ್ಯ ಉಪಾಧ್ಯಕ್ಷರೇ.....

ಉಪಾಧ್ಯಕ್ಷರು :- ತಾವು ಕೂಡ್ರಿ ತಮ್ಮ ಪ್ರಶ್ನೆಗೆ ಉತ್ತರ ಸಿಕ್ಕಿತಲ್ಲ. ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಸಯದ್ ಜುಲ್ಫಿಕರ್ ಹಷ್ಮಿ :- ಅವರು ಏನು ಉತ್ತರ ಕೊಟ್ಟರು?

ಉಪಾಧ್ಯಕ್ಷರು :- ತಾವು ದಯಮಾಡಿ ಕೂಡ್ರಿ. ತಾವು ಈ ರೀತಿ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಶ್ರೀ ಬಿ.ಎ. ಮೊಹಿದ್ದೀನ್ :- ಈ ರೀತಿ ಆದರೆ ಶೂನ್ಯ ವೇಳೆಯ ಸ್ವಾಂಕ್ಟಿಟಿ ಏನು ಉಳಿಯುತ್ತದೆ?

(ಗೊಂದಲ)

ಉಪಾಧ್ಯಕ್ಷರು :- ಈ ಪದ್ಧತಿ ಒಳ್ಳೆಯದಲ್ಲ. ವಾಟಾಳ್ ನಾಗರಾಜ್ ಅವರೇ ತಾವು ಅವರ ಪರ ವಕೀಲಿ ಮಾಡಿದಿರಿ ನೋಡಿ ಈಗ.

(ಗೊಂದಲ)

ಶ್ರೀ ಸಿ. ಆರ್. ಸಗೀರ್ ಅಹ್ಮದ್ :- ಮಾನ್ಯ ಉಪಾಧ್ಯಕ್ಷರೇ ಒಬ್ಬ ವ್ಯಕ್ತಿ ಒಂದು ಸಮಾಜಕ್ಕೆ ಬೈಯುತ್ತಾರೆಂದು ಹೇಳಿದರೂ ಕೂಡ ತಾವು ಕ್ರೂರಿ, ಕ್ರೂರಿ ಅಂದ್ರೆ ಹೇಗೆ? ಒಬ್ಬ ಜವಾಬ್ದಾರಿಯುತ ಸದಸ್ಯರು ಹೇಳುತ್ತಿದ್ದಾರೆ ಒಂದು ಸಮಾಜಕ್ಕೆ ಹೀನಾಯ ಮಾನವಾಗಿ ಬೈಯುವಂತಹ ವ್ಯಕ್ತಿಯನ್ನು ತಾವು ಅಧ್ಯಕ್ಷರಾಗಿ ಇಟ್ಟಿರುವುದು ಸರಿಯೇ ಎನ್ನುವಂಥಹ ಒಂದು ಪ್ರಶ್ನೆ. ಈಗ ತಾವು ಅದೂ ಸರಿ ಎಂದು ಹೇಳುವುದಾದರೆ ಇರಲಿ ಬಿಡಿ. ಬೈಯುವುದು ಸರಿ ಎಂದು ಆದರೆ ಸರ್ಕಾರದವರು ಅದನ್ನು ಹೇಳಲಿ.

ಉಪಾಧ್ಯಕ್ಷರು :- ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ :- ಮೊಹದ್ದೀನ್ ಸಾಹೇಬರ್ ತಾವು ಹೇಳುತ್ತೀರಿ ಆದರೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅವರು ಓಪನ್ ಆಗಿ ಆ ಕಮೀಷನ್ನಿನ ಒಬ್ಬ ಮೆಂಬರ್‌ಗೆ ಬೈಯುತ್ತಾನೆ.

ಉಪಾಧ್ಯಕ್ಷರು :- ನಿಮಗೆ ಅದು ಅರ್ಥವಾಗುತ್ತದೆಯೋ ಇಲ್ಲವೋ?

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಉಪಾಧ್ಯಕ್ಷರೇ, ನನ್ನ ಮಾನ್ಯ ಮಿತ್ರರಾಗಿರತಕ್ಕ ಹಷ್ಮೀಯವರು ವಿಚಾರವನ್ನು ಎತ್ತುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ಆದರೆ ಇದು ಸದನ, ನಾನು ದಯವಿಟ್ಟು ಹೇಳುತ್ತೇನೆ ತಾವು ಯಾವ ವಿಚಾರವನ್ನು ಎತ್ತಿ ಸರ್ಕಾರದ ಗಮನವನ್ನು ಸೆಳೆಯುತ್ತೀರಿ ಅದಕ್ಕೆ ಸರ್ಕಾರದವರು ಉತ್ತರ ಕೊಡುತ್ತೇವೆ. ಆದರೆ, ಕೆಲವು ಸಂದರ್ಭದಲ್ಲಿ ನಾವು ಬಳಸುತ್ತಾ ಇರತಕ್ಕಂಥ ಪದ ಧಾಟಿ, ಪದಗಳು ನಾವು ಈ ಸದನದ ಗಂಬೀರತೆಯನ್ನು ಉಳಿಸಿಕೊಳ್ಳಬೇಕಾಗುತ್ತದೆ. ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನೀವು ವಿಚಾರವನ್ನು ಎತ್ತಿ ಅದಕ್ಕೆ ಉತ್ತರವನ್ನು ಕೊಡುತ್ತೇವೆ. ಆದರೆ ಕೆಲವು ಸಂದರ್ಭದಲ್ಲಿ ಈ ಸದನವನ್ನು ಗಂಭೀರವಾಗಿ ಒಂದು ವಾತಾವರಣಕ್ಕೆ ತಂದು ಏನೋ ಈ ಸದನದಲ್ಲಿ ನಡೆಯುತ್ತದೆ ಎಂದು ಹೇಳುವಂತಹ ಪರಿಸ್ಥಿತಿ ನಿರ್ಮಾಣ ಮಾಡಬೇಡಿ ಎಂದು ನಾನು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಸಯದ್ ಜುಲ್ಫಿಕರ್ ಹಶ್ಮಿ :- ಒಂದು ಅಲ್ಪ ಸಂಖ್ಯಾತರ ಸಮಾಜದಲ್ಲಿ ಹುಟ್ಟಿ, ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿ, ಇಡೀ ಅಲ್ಪಸಂಖ್ಯಾತರ ಸಮಾಜಕ್ಕೆ, ಅಲ್ಪಸಂಖ್ಯಾತರ ಕಲ್ಚರ್‌ಗೆ ಅವರ ಭಾಷೆಗೆ ಇಡೀ ಅವರ ಕೆಲಸಕ್ಕೆ ಅವರು ವಿರೋಧ ಮಾಡುತ್ತಾರೆ. ಅಲ್ಪಸಂಖ್ಯಾತರ ಅಭಿವೃದ್ಧಿ ಸಲುವಾಗಿ ಸರ್ಕಾರಕ್ಕೆ ಒಂದು ಪ್ರಸ್ತಾವನೆ ಕೊಟ್ಟಿಲ್ಲ, ಅವರಿಗೆ ಅಲ್ಪಸಂಖ್ಯಾತರ ಸಮಸ್ಯೆ ಗೊತ್ತಿಲ್ಲ. ಇಂತಹವರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಯೇ? ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಅಧ್ಯಕ್ಷರೇ I can also raise my tone now. But I would not do that. ಈಗ ಅವರು ಕೇಳಿರತಕ್ಕಂಥ ವಿಚಾರ ಮೈನಾರಿಟಿ ಕಮೀಷನ್‌ನಲ್ಲಿ ಒಂದು ಜಂಟಿ ರಿಜಿಸ್ಟಾರ್ ಹುದ್ದೆ ಇದೆ. ಮೈನಾರಿಟಿ ಕಮೀಷನ್‌ನಲ್ಲಿ ಒಂದು ಜಂಟಿ ರಿಜಿಸ್ಟಾರ್ ಹುದ್ದೆ ಇದೆ. ಮೈನಾರಿಟಿ ಕಮೀಷನ್‌ಗೆ ಅಧ್ಯಕ್ಷರನ್ನಾಗಿ ನೇಮಿಸಿರತಕ್ಕಂಥವರು ಈ ಹಿಂದೆ ಕೂಡ ಅವರು ಮೈನಾರಿಟ ಕಮೀಷನ್‌ನಲ್ಲಿ ಸದಸ್ಯರಾಗಿ ಕೆಲಸ ಮಾಡಿದಂತಹ ಪ್ರೊ. ಬಷೀರ್ ಹುಸೇನ್ ಅವರು. He was my Principal. He was the Principal of the Government Law College, ಅದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಅವರ ಬಗ್ಗೆ ಕೆಲವು ವಿಚಾರಗಳನ್ನು ಎತ್ತಿದ್ದಾರೆ. ತಾವು ಇದಕ್ಕೆ ಸಂಬಂಧಪಟ್ಟ ಹಾಗೆ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆಯಿರಿ. ಮಾನ್ಯ ಸಗೀರ್ ಅಹ್ಮದ್ ಅವರು ಈ ವಿಚಾರಧಾರೆಯಲ್ಲಿ ಅದು ಸರಿ ಎಂದು ಆದರೆ ಇರತಕ್ಕಂಥ ವಿಚಾರಗಳನ್ನು ಸಂಪೂರ್ಣವಾಗಿ ಎತ್ತಿಕೊಂಡು ಬಹುಶ: ಎನು ನಡೆಯುತ್ತಿದೆ ಎಂದುಮಾನ್ಯ ಮುಖ್ಯಮಂತ್ರಿಗಳಿಗೆ ತಾವು ಸಹ ಒಂದು ಪತ್ರವನ್ನು ಬರೆಯಿರ. ಅವರು ಇದನ್ನು ವಿಚಾರ ಮಾಡುತ್ತಾರೆ. ಎರಡನೆಯದು ಅಲ್ಲಿರತಕ್ಕಂಥ ಜಂಟಿ ರಿಜಿಸ್ಟಾರ್‌ರ ಹುದ್ದೆ. ಅದು ಒಂದು ಪರ್ಮನೆಂಟ್ ಹುದ್ದೆ. ಈಗ ಯಾರು ಕೆಲಸ ಮಾಡುತ್ತಿದ್ದಾರೆ ಅವರ ಬಗ್ಗೆ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆಂದು ಹೇಳುತ್ತಿದ್ದೀರಿ. ಅವರು ಸರ್ಕಾರಕ್ಕೆ ಏನು ಪತ್ರವನ್ನು ಬರೆದಿದ್ದಾರೆ ಅದನ್ನು ನಾವು ವಿಚಾರ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕೆಲವು ವಿಚಾರಗಳು ವೈಯಕ್ತಿಕವಾಗಿ ಇದ್ದರೆ ಬಂದು ಹೇಳಿ ಆಗ ಉತ್ತರ ಹೇಳುವುದಕ್ಕೆ ನಮಗೂ ಸುಲಭವಾಗುತ್ತದೆ.

ಶ್ರೀ ಸಯದ್ ಜುಲಿಫಕರ್ ಹಶ್ಮಿ :- ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು ಎನ್ನುವುದು ನಮ್ಮ ಆಸೆ. ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು ಅದಕ್ಕೆ, ಅವರನ್ನು ಅಧ್ಯಕ್ಷ ಗಿರಿಯಿಂದ ತೆಗೆದು ಹಾಕಿ.

ಶ್ರೀ ಎಂ.ಸಿ. ನಾಣಯ್ಯ :- ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಇದೆ. ಅದನ್ನು ಬಳಸಿಕೊಂಡೇ ನಾವು ಕೆಲಸ ಮಾಡುತ್ತೇವೆ.

ಶ್ರೀ ಸಯದ್ ಜುಲ್ಫಿಕರ್ :- ಮೈನಾರಿಟಿ ಕಮೀಷನ್‌ನಲ್ಲಿ.....

ಉಪಾಧ್ಯಕ್ಷರು :- ನಿಮಗೆ ಕನ್ನಡ ಅರ್ಥವಾಗುವುದಿಲ್ಲವೇ? ನೋಡಿ ನೀವು ಈ ರೀತಿ ಮಾಡಿದರೆ ನಿಮ್ಮ ಮೇಲೆ ಕ್ರಮ ಜರುಗಿಸಬೇಕಾಗುತ್ತದೆ. ಇದು ಸರಿಯಲ್ಲ. ಪ್ರಕಾಶ್ ಹುಕ್ಕೇರಿಯವರಿಗೆ ಉತ್ತರ ಹೇಳಿ.

ಶ್ರೀ ಎಸ್ .ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಪ್ರಕಾಶ್ ಹುಕ್ಕೇರಿಯವರು 3 ಸಹಕಾರಿ ಸಂಘಗಳನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನವರು ನಾವು ಅರ್ಜಿಯನ್ನು ಕೊಟ್ಟಿದ್ದೇವೆ ನಮ್ಮನ್ನು ಮೆಂಬರ್ ಮಾಡಿಕೊಂಡಿಲ್ಲ ಎಂದು ಕೇಳಿದ್ದಾರೆ. ಈಗಾಗಲೇ ನಾವು 18-2-98 ರಂದು ಡೆಪ್ಯುಟಿ ರಿಜಿಸ್ಟ್ರಾರ್ ಅವರು ಆದೇಶ ಮಾಡಿದ್ದಾರೆ ಅವರನ್ನು ಮೆಂಬರ್ ಮಾಡಿಕೊಳ್ಳಿ ಎಂದು ಅವರು ತಮ್ಮ ಕಮಿಟಿಯಲ್ಲಿಟ್ಟು ಮೆಂಬರ್ಸ್ ಮಾಡಿಕೊಳ್ಳುವ ದಿಸೆಯಿಂದ ಎಕ್ಸಿಕ್ಯೂಟೀವ್ ಕಮಿಟಿಯಲ್ಲಿಟ್ಟರು ಆಮೇಲೆ ಬೋರ್ಡ್‌ನಲ್ಲಿ ಇಟ್ಟು ಮಾಡಿ ಕೊಡುತ್ತೇವೆಂದು ತಿಳಿಸಿದ್ದಾರೆ. ನೀವು 17-9-97ರಂದು ಅರ್ಜಿ ಕೊಟ್ಟಿದ್ದೀರಿ. ಬಹುಶ: 3 ತಿಂಗಳೊಳಗೆ ಉತ್ತರ ಕೊಡದಿದ್ದರೆ 105ರ ಪ್ರಕಾರ ಮೇಲ್ಮನವಿ ಸಲ್ಲಿಸುವುದಕ್ಕೆ ಅಧಿಕಾರ ಇದೆ. ತಾವು ಮೇಲ್ಮನವಿಯನ್ನು ಸಲ್ಲಿಸಬಹುದು, ನಾವು ಕೂಡ ಸರ್ಕಾರದ ಪರವಾಗಿ ಒತ್ತಡ ತರುತ್ತೇವೆ ಮಾಡಿಕೊಳ್ಳುವುದಕ್ಕೆ ಹೇಳುತ್ತೇವೆ. ಒಂದು ವೇಳೆ ಅವರು ಮಾಡಿಕೊಳ್ಳದಿದ್ದರೆ ತಮಗೆ ಕಾಯ್ದೆಯಲ್ಲಿ ಅವಕಾಶ ಇದೆ. ನಾವು ಕೂಡ ಅಲ್ಲಿ ಮೆಂಬರ್ಸ್ ಮಾಡಿಸುವ ಪ್ರಯತ್ನ ಮಾಡುತ್ತೇವೆ.

(5) ಗಮನ ಸೆಳೆಯುವ ಸೂಚನೆಗಳು

(ಅ) ಶಿಗ್ಗಾಂವ್ ತಾಲ್ಲೂಕ್ ಸವಣೂರು ಬಂಕಾಪುರ ಪಟ್ಟಣಗಳಿಗೆ ವರಹಾ ನದಿಯಿಂದ ಸಂಯುಕ್ತ ಕುಡಿಯುವ ನೀರಿನ ಯೋಜನೆ

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) :- ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ ತಾಲ್ಲೂಕು, ಸವಣೂರು ಹಾಗೂ ಬಂಕಾಪುರ ಪಟ್ಟಣಗಳಿಗೆ ವರಹಾ ನದಿಯಿಂದ ಸಂಯುಕ್ತ ಕುಡಿಯುವ ನೀರಿನ ಯೋಜನೆ ವಿಳಂಬವಾಗಿರುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

★ಶ್ರೀ ಬಿ. ಎನ್. ಬಚ್ಚೇಗೌಡ (ಮಾನ್ಯ ನಗರಾಭಿವೃದ್ಧಿ ಸಚಿವರು) :- ಶಿಗ್ಗಾಂವ, ಸವಣೂರು ಮತ್ತು ಬಂಕಾಪುರ ಸಂಯುಕ್ತ ನೀರು ಸರಬರಾಜು ಯೋಜನೆಯ ಅಂದಾಜು ಮೊತ್ತ ರೂ. 745.00 ಲಕ್ಷಗಳಿಗೆ ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ. ಪನ ಇ:61:ಯುಡಬ್ಲು ಎನ್ :91, ದಿನಾಂಕ 9. 10.91 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಸಂಯುಕ್ತ ಯೋಜನೆಯಡಿ 2021 ರಲ್ಲಿ ಊಹಿಸಲಾದ ಒಟ್ಟು ಜನಸಂಖ್ಯೆ 1,30,000 ಪ್ರತಿ ದಿನ ತಲಾ 100 ಲೀಟರ್ ನೀರನ್ನು ಒದಗಿಸಲು ಯೋಜಿಸಲಾಗಿತ್ತು. ಮೇಲ್ಕಂಡ ಯೋಜನೆಯಡಿಯಲ್ಲಿ ನಾಗನೂರು ಜಲಾಶಯ ಕೆಲಸವನ್ನು ಕೈಗೆತ್ತಿಕೊಂಡು, ಪೂರ್ಣಗೊಳಿಸಿ ಈವರೆಗೆ ರೂ. 690. 14 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಹಾಗೂ ನಾಗನೂರು ಕೆರೆಯಲ್ಲಿ ನೀರಿನ ಶೇಖರಣಾಗಾರವನ್ನು ಕಟ್ಟಲು ಪ್ರಸ್ತಾಪಿಸಿದ್ದ ಸ್ಥಳವನ್ನು ಮಾರ್ಪಡಿಸಿದ್ದೆ ಸಲುವಾಗಿ ಪರಿಷ್ಕೃತ ಅಂದಾಜನ್ನು ತಯಾರಿಸಬೇಕಾಯಿತು. ಈ ಪರಿಷ್ಕೃತ ಅಂದಾಜನ್ನು ರೂ. 1793.00 ಲಕ್ಷವನ್ನು ತಯಾರಿಸಲಾಗಿ, ಇದರಲ್ಲಿ ಬಂಕಾಪುರ ಪಟ್ಟಣದ ಪಾಲಿನ ರೂ. 474.64 ಲಕ್ಷವನ್ನು ತುಂಬಲು ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆರವರಿಗೆ ಒಪ್ಪಿಗೆ ನೀಡಲು ತಿಳಿಸಲಾಯಿತು. ಆದರೆ, ಸರ್ಕಾರದ ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಬಂಕಾಪುರ ಪಟ್ಟಣವನ್ನು ಈ ಯೋಜನೆಯಲ್ಲಿ ಸೇರಿಸುವ ಅಗತ್ಯವಿಲ್ಲವೆಂದು ತಿಳಿಸಿರುತ್ತಾರೆ. ಈ ಮಧ್ಯೆ ಮಧ್ಯಂತರ ಹಳ್ಳಿಗಳನ್ನು ಸಹ ಸೇರಿಸಿಕೊಂಡು, ಶಿಗ್ಗಾಂವ ಮತ್ತು ಸವಣೂರು ಪಟ್ಟಣಕ್ಕೆ ಪರಿಷ್ಕೃತ ಅಂದಾಜನ್ನು ರೂ. 2020 ಲಕ್ಷಗಳಿಗೆ ತಯಾರಿಸಲಾಯಿತು.